2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ, ನ್ಯಾಯಾಲಯ ಗೋಕಾಕ

ಅಸಲ ದಾವಾ ನಂ:219/2020

**ದಿನಾಂಕಃ 03.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಡಿ.ಡಬ್ಲ್ಯು.4

| | |
|---|---|
| ಹೆಸರು | ಬಾಗಪ್ಪ ದಳವಾಯಿ |
| ತಂದೆ ಹೆಸರು | ಸಿದ್ದಪ್ಪ |
| ವಯಸ್ಸು | 80 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ತಪಶಿ |

**ಮುಖ್ಯ ವಿಚಾರಣೆಃ ಪ್ರತಿವಾದಿಯರ ಪರ ಶ್ರೀ ಬಿ.ಕೆ.ಜೆ ವಕೀಲರಿಂದಃ**

ನಾನು ಪ್ರತಿವಾದಿಯರ ಪರ ಸಾಕ್ಷಿ ಇದ್ದು, ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ.

**ಪಾಟೀಸವಾಲುಃ ವಾದಿ ಪರ ಶ್ರೀ ಎಲ್.ಎಮ್.ಎಸ್ ವಕೀಲರಿಂದ:**

ನಾನು ಹುಟ್ಟಿದ ವರ್ಷ ಹೇಳಲು ಆಗುವುದಿಲ್ಲ, ಏಕೆಂದರೆ ನಾನು ಶಾಲೆ ಕಲಿತಿಲ್ಲ. ನನಗೆ ಈಗ 65 ವರ್ಷ ಎಂದರೆ ಸಾಕ್ಷಿಯು 80 ವರ್ಷ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸರ್ವೇ ನಂಬರ ನನಗೆ ಹೇಳಲು ಆಗುವುದಿಲ್ಲ. ಆದರೆ 15 ಎಕರೆ 21 ಗುಂಟೆ ಇರುತ್ತದೆ. ದಾವಾ ಆಸ್ತಿಯ ಚಕಬಂದಿ ಹೇಳುತ್ತೇನೆ. ಪೂರ್ವಕ್ಕೆ : ಕಂಬಣ್ಣ ದಳವಾಯಿ ರವರ ಜಮೀನು, ಪಶ್ಚಿಮಕ್ಕೆ : ಬಾಗಪ್ಪ ಅವರಾದಿ ರವರ ಜಮೀನು, ಉತ್ತರಕ್ಕೆ : ಕಚ್ಚಾ ರಸ್ತೆ, ದಕ್ಷಿಣಕ್ಕೆ : ಯಲ್ಲಪ್ಪ ನಾಗನೂರ ಇವರ ಜಮೀನು.

ಬಸವಣ್ಣೆಪ್ಪ ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮಾಲೀಕರು ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಸಾಗುವಳಿ ಮಾಡಲು ಅದರ ಮಾಲೀಕರು ಸಾಯನ್ನವರ ರವರಿಗೆ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ನನಗೆ ಬುದ್ಧಿ ಬಂದಾಗಿನಿಂದಲೂ ಪ್ರತಿವಾದಿಯರೇ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಜಮೀನಿಗೆ ಪೈಪಲೈನ್ ಸೌಲಭ್ಯವನ್ನು ವಾದಿ ಮಾಡಿಸಿರುತ್ತಾನೆ ಎಂದರೆ ಸಾಕ್ಷಿಯು ಪ್ರತಿವಾದಿಯರು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಬೆಳೆದ ಕಬ್ಬನ್ನು ಬೆಲ್ಲ ತಯಾರಿಸಲು ಗಾನಕ್ಕೆ ಕಳಿಸುತ್ತಾರೆ. ಈ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯನ್ನು ನಾನು ನೋಡಿರುವುದಿಲ್ಲ. ವಾದಿ ದಾವಾ ಆಸ್ತಿಯನ್ನು ಸಾಗುವಳಿ ಮಾಡಲು ಪ್ರತಿವಾದಿಯರಿಗೆ ಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ಅಣ್ಣ ತಮ್ಮಂದಿರು ಏನೇನೂ ಕೆಲಸ ಮಾಡುತ್ತಾರೆ ಎಂದರೆ ನಾನು ಅವರನ್ನು ನೋಡಿಯೇ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಾದಿಯ ಕುಟುಂಬದವರ ಬಗ್ಗೆ ಹಾಗೂ ದಾವಾ ಆಸ್ತಿಯ ಸರ್ವೇ ನಂಬರ ಬಗ್ಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಯನ್ನವರ ರವರು ಮಾಹಿತಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನನ್ನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು 1ನೇ ಪ್ರತಿವಾದಿಯ ಮಗ ಕರೆದುಕೊಂಡು ಬಂದಿರುತ್ತಾನೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಗೊತ್ತಿರದೇ ಇದ್ದರೂ ಸಹ 1ನೇ ಪ್ರತಿವಾದಿ ಹಾಗೂ ಆತನ ಮಗನ ಮಾತು ಕೇಳಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಂಗತಿಗಳುಳ್ಳ ಮುಖ್ಯ

ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಸಾಯನ್ನವರ ರವರ ಜಮೀನು ಸಾಗುವಳಿ ಮಾಡುವ ಕುರಿತು ಯಾವ ತರಹದ ದಾಖಲೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

**ಪಾಟಿ ಸವಾಲು:** 7 ರಿಂದ 13ನೇ ಪ್ರತಿವಾದಿಯರು ವಾದಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದರಿಂದ ಅವರ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
2ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ